ಕರ್ನಾಟಕ ಸರ್ಕಾರದ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು- 560 001

ಸಂಖ್ಯೆ:ಸಿ8(1)ಶಾ.ಶಿ.ಅ/ಖಾ.ಹು.ಬ.ಇತರೆ-01/2014-15 ದಿನಾಂಕ: 21.07.2017

: ಸುತ್ತೋಲೆ :

ವಿಷಯ:- ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ದಿನಾಂಕ:31/12/2014 ರವರೆಗೆ ನಿವೃತ್ತಿ, ರಾಜೀನಾಮೆ ಮರಣ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಆದೇಶ ಸಂ.ಇಡಿ48.ಎಸ್.ಇ.ಪಿ.2006 ದಿನಾಂಕ:12/04/2006

2) ಸರ್ಕಾರದ ಆದೇಶ ಸಂ.ಇಡಿ.14.ಎಸ್.ಇ.ಡಿ.2017. ದಿನಾಂಕ:29/06/2017 ಮತ್ತು18/07/2017

*************

MAHANTAGOUD T PATIL SWCM KSPSTA

ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ವಿವಿಧ ಕಾರಣಗಳಿಂದ ತೆರವಾದ ಬೋಧಕ ಹುದ್ದೆ ಮತ್ತು ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಯಲ್ಲಿ ಬಳಸಿಕೊಂಡು ನಂತರ ದಿನಾಂಕ:31/12/2012ರ ವರೆಗಿನ ಖಾಲಿಯಾದ ಬೋಧಕ ಹುದ್ದೆಗಳು 1476 ಮತ್ತು ದಿನಾಂಕ: 31/12/2014ರವರೆಗಿನ ಖಾಲಿಯಾದ 1275 ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ. [ಪ್ರತಿ ಲಗತ್ತಿಸಿದೆ]

ಈ ಸಂಬಂಧ ಸದರಿ ಪ್ರಸ್ತಾಪಿತ ಖಾಲಿ ಹುದ್ದೆಗಳ ಸಂಖ್ಯೆಯನ್ನು ಈಗಾಗಲೇ ಜಿಲ್ಲಾ ಉಪನಿರ್ದೇಶಕರ ಕಛೇರಿಗಳಿಂದ ನೀಡಲಾದ ಅಂಕಿ ಅಂಶಗಳನ್ನು ಆಧರಿಸಿ ನೀಡಿರುವುದಾಗಿರುತ್ತದೆ. ಅದರಂತೆ ಖಾಲಿಹುದ್ದೆಗಳ ಪ್ರಸ್ತಾಪಿತ ಸಂಖ್ಯೆಯು ನಿಮ್ಮ ಕಛೇರಿಯಿಂದ ಸಲ್ಲಿಕೆಯಾದ ಮಿತಿಗೆ ಒಳಪಡುವುದನ್ನು ಗಮನಿಸತಕ್ಕದ್ದು.

ಉಲ್ಲೇಖ(2)ರ ಸರ್ಕಾರದ ಆದೇಶಗಳಲ್ಲಿ ನೇಮಕಾತಿ ಅನುಮೋದನೆ ಪ್ರಾಧಿಕಾರ ಸರ್ಕಾರವೇ ಆಗಿರುತ್ತದೆ ಹಾಗೂ ಸದರಿ ಆದೇಶದಲ್ಲಿ ವಿಧಿಸಲಾದ ಷರತ್ತುಗಳನ್ನು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳುವ ಮೂಲಕ ಅನುಪಾಲಿಸುವುದಲ್ಲದೆ ಈ ಕೆಳಕಂಡ ಅಂಶಗಳ ಬಗ್ಗೆಯೂ ಸಹ ಕೂಲಂಕಷವಾಗಿ ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ಸ್ವಯಂ ಖಚಿತ ಪಡಿಸಿಕೊಂಡು ತತ್ಸಂಬಂಧಿಸಿದ ದೃಢೀಕೃತ ಪೂರಕ ದಾಖಲೆಗಳನ್ನು ಪ್ರಸ್ತಾವನೆಯೊಂದಿಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಸಂಬಂಧಿಸಿದ ಅನುದಾನಿತ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು (Regular Candidates only) ಕಳೆದ 5 ಶೈಕ್ಷಣಿಕ ವರ್ಷಗಳ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು.

1. ಖಾಲಿ ಹುದ್ದೆಗೆ ಭರ್ತಿ ಮಾಡಿಕೊಳ್ಳಲು ಅನುಮತಿಗಾಗಿ ಪ್ರಸ್ತಾಪಿಸಿದ ಶಾಲೆಯ ಆಡಳಿತ ಮಂಡಳಿಯು ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರತಕ್ಕದ್ದು ಪ್ರಸ್ತಾವನೆ ಸಲ್ಲಿಸುವ ದಿನಾಂಕಕ್ಕೆ ನವೀಕರಿಸಿರತಕ್ಕದ್ದು, ಆಡಳಿತ ಮಂಡಳಿಯು ಸ್ವರೂಪ(ಪರಿಶಿಷ್ಠಜಾತಿ/ಪಂಗಡ/ಮತೀಯ ಅಲ್ಪಸಂಖ್ಯಾತ) ಇತ್ಯಾದಿ ವಿವರಗಳನ್ನು ಪರಿಶೀಲಿಸಿ ಸ್ಪಷ್ಟವಾಗಿ ದಾಖಲಿಸತಕ್ಕದ್ದು.
2. ಆಡಳಿತ ಮಂಡಳಿಯ ಮೇಲೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ.
3. ಸಂಬಂಧಿಸಿದ ಶಿಕ್ಷಣ ಸಂಸ್ಥೆ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಅಡಿಯಲ್ಲಿ ರಚಿತವಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳು( ವರ್ಗೀಕರಣ ಮತ್ತು ನೋಂದಣಿ) ನಿಯಮಾವಳಿ 1997ರ ಪ್ರಕಾರ ನೋಂದಣಿಯಾಗಿರಬೇಕು.
4. ಕನಾಟಕ ಶಿಕ್ಷಣ ಕಾಯ್ದೆ-1983 ಕರ್ನಾಟಕ ಶಿಕ್ಷಣ ಸಂಸ್ಥೆಗಳು ( ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮಗಳು -1999) ರ ಪ್ರಕಾರ ಮಾನ್ಯತೆಯನ್ನು ಪಡೆದು ಪ್ರಸಕ್ತ ಸಾಲಿನವರೆಗೂ ಮಾನ್ಯತೆಯನ್ನು ನವೀಕರಿಸತಕ್ಕದ್ದು

5. ನಿಗಧಿತ ಮೂಲಭೂತ ಸೌಕರ್ಯಗಳನ್ನು ಪೂರೈಸಿರುವ ಬಗ್ಗೆ ಸಂಬಂಧಿಸಿದ ಪ್ರೌಢಶಾಲೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸತಕ್ಕದ್ದು, ಈ ಸಂಬಂಧ ಮೌಲ್ಯಮಾಪನದಲ್ಲಿ ಕನಿಷ್ಟ ೮೦ ಅಂಕಗಳು ಗಳಿಸುವುದು ಕಡ್ಡಾಯವಾಗಿರುತ್ತದೆ. ೮೦ಕ್ಕಿಂತ ಕಡಿಮೆ ಅಂಕಗಳಿಸಿದ ಸಂಭಂಧಿಸಿದ ಶಾಲೆ ಸೌಲಭ್ಯಪಡೆಯಲು ಅರ್ಹವಾಗಿರುವುದಿಲ್ಲ.

6. ಪ್ರಸ್ತಾಪಿಸಿದ ಖಾಲಿ ಹುದ್ದೆಗೆ ಮಾಡಿಕೊಂಡ ನೇಮಕಾತಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಅನುಮೋದಿತ ಹುದ್ದೆಯಾಗಿರುತಕ್ಕದ್ದು. ಈ ಕುರಿತು ಸಂಬಂಧಿಸಿದ ದೃಢೀಕೃತ ದಾಖಲೆಗಳನ್ನು ಸಲ್ಲಿಸತಕ್ಕದ್ದು.

7. ಪ್ರಸ್ತಾಪಿತ ಶಾಲೆಯು ದಾಖಲಾತಿಯಲ್ಲಿ 30 ಮತ್ತು ಹಾಜರಾತಿಯಲ್ಲಿ 25 ಮಕ್ಕಳ ನಿಗಧಿತ ಕನಿಷ್ಠ ಮಟ್ಟದ ಸಂಖ್ಯಾಬಲವನ್ನು ಹೊಂದಿರತಕ್ಕದ್ದು.

8. ಮೇಲ್ಕಂಡಂತೆ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅವಕಾಶವಿರುವ ಅನುದಾನಿತ ವಿಭಾಗಗಳನ್ನು ಪರಿಶೀಲಿಸಿಕೊಳ್ಳತಕ್ಕದ್ದು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ-1983ರಡಿಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಮಾದರಿ ಸಿಬ್ಬಂದಿ ಸ್ತರ ವಿನ್ಯಾಸದಂತೆ ಹಾಗೂ ಕಾರ್ಯಭಾರವನ್ನು ಪರಿಗಣಿಸಿಕೊಂಡು ಅಗತ್ಯವಿರುವ ವಿಷಯವಾರು ಖಾಲಿ ಹುದ್ದೆಗಳನ್ನು ಗುರುತಿಸತಕ್ಕದ್ದು.

9. ಖಾಲಿ ಹುದ್ದೆಯು ನಿಧನ, ನಿವೃತ್ತಿ, ರಾಜೀನಾಮೆ, ಇತ್ಯಾದಿ ಕಾರಣಗಳಿಂದ ತೆರವಾದ ರೀತಿಯನ್ನು ಸ್ಪಷ್ಟಪಡಿಸತಕ್ಕದು. ಹುದ್ದೆ ತೆರವಾದ ಬಗ್ಗೆ ಸ್ವಯಂ ನಿವೃತ್ತಿ, ರಾಜೀನಾಮೆ ಕ್ರಮಗಳು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾಗಿರತಕ್ಕದ್ದು. ಮೇಲ್ಕಂಡ ಅಂಶಗಳ ಕುರಿತು ಪಿಂಚಣಿ ಮಂಜೂರಾತಿ ಆದೇಶ/ಅನುಮೋದನೆ ಅದೇಶಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

10. ಈ ಹಿಂದೆ ಯಾವ ಬಿಂದುವಿನಡಿಯಲ್ಲಿ ಖಾಲಿಹುದ್ದೆ ಭರ್ತಿ ಮಾಡಿಕೊಳ್ಳಲು ಇಲಾಖಾ ವತಿಯಿಂದ ಅನುಮತಿ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಮೂಲಕ ಶಾಲೆಯಲ್ಲಿನ ಪ್ರಸ್ತಾಪಿತ ಖಾಲಿಹುದ್ದೆಯನ್ನು ಮೀಸಲಾತಿ ನಿಯಮಗಳಂತೆ ಯಾವ ಬಿಂದುವಿನಿಂದ ತುಂಬಲು ಅನುಮತಿಸಬೇಕು ಎಂಬ ಬಗ್ಗೆ ದಾಖಲೆಗಳೊಂದಿಗೆ ಸ್ಪಷ್ಟಪಡಿಸಬೇಕು. ಈ ಸಂಬಂಧ, ಈ ಹಿಂದೆ ಅನುಮತಿಸಿದ ಬಿಂದುವಿನ ಬಗ್ಗೆ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.

11. ಆಡಳಿತ ಮಂಡಳಿಯಡಿಯಲ್ಲಿ ಒಂದಕ್ಕಿಂತ ಹೆಚ್ಚು ಅನುದಾನಿತ ಪ್ರೌಢಶಾಲೆಗಳು ನಡೆಯುತ್ತಿದ್ದಲ್ಲಿ ಅಂತಹ ಎಲ್ಲಾ ಪ್ರೌಢಶಾಲೆಗಳ ಬಗ್ಗೆ ಮಾಹಿತಿಯನ್ನು ಕ್ರೋಢೀಕರಿಸುವುದು ಮತ್ತು ಅದರ ಅಧೀನದಲ್ಲಿರುವ ಎಲ್ಲಾ ಅನುದಾನಿತ ಪ್ರೌಢಶಾಲೆಗಳಲ್ಲಿನ ಎಲ್ಲಾ ಅನುಮೋದಿತ ಶಿಕ್ಷಕರ ಸಾಮಾನ್ಯ ಪಟ್ಟಿಯನ್ನು ತಯಾರಿಸಿ ಸದರಿ ಶಾಲೆಗಳಲ್ಲಿ ಈವರೆಗೆ ಅನುಮೋದಿತಗೊಂಡ ಶಿಕ್ಷಕರ ಮೀಸಲಾತಿಯನ್ನು ಪರಿಗಣಿಸಿ ನಿಗಧಿಪಡಿಸಬೇಕಾದ ಬಿಂದುವಿನ ಬಗ್ಗೆ ಪ್ರಸ್ತಾಪಿಸತಕ್ಕದ್ದು. ಖಾಲಿ ಹುದ್ದೆ ತುಂಬಿಕೊಳ್ಳಲು ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಲ್ಲಿಸಲಿರುವ ಪ್ರಸ್ತಾಪಿತ ಶಾಲೆಯ ವ್ಯಾಪ್ತಿಯ ಜಿಲ್ಲಾ ಉಪನಿರ್ದೇಶಕರು ಈ ಕ್ರಮವನ್ನು ವಹಿಸತಕ್ಕದ್ದು. ಈ ಸಂಬಂಧ ಶಾಲಾ ವ್ಯಾಪ್ತಿಯಲ್ಲಿನ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ/ಉಪನಿರ್ದೇಶಕರಿಂದ ದೃಢೀಕೃತ ಮಾಹಿತಿಯನ್ನು ಸಲ್ಲಿಸುವಂತೆ ಸಂಬಂಧ ಪಟ್ಟ ಆಡಳಿತ ಮಂಡಳಿಗೆ ನಿರ್ದೇಶನ ನೀಡುವುದು.

12. ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಶಿಕ್ಷಕರನ್ನು ಕಾರ್ಯಭಾರವಿರುವ ಇತರೆ ಅನುದಾನಿತ ಪ್ರೌಢಶಾಲೆಗಳಿಗೆ ಸ್ಥಳಾಂತರಿಸಲಾದ ಹುದ್ದೆಗಳು ತಾನಾಗಿಯೇ ರದ್ದಾಗಲಿದ್ದು ಅವುಗಳನ್ನು ತುಂಬಲು ಅವಕಾಶವಿರುವುದಿಲ್ಲ.

13. ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆಯಲ್ಲಿ ಹೆಚ್ಚುವರಿ ಎಂದು ಗುರುತಿಸಲ್ಪಟ್ಟ ಶಿಕ್ಷಕರನ್ನು ಪುನರ್‌ಸ್ಥಾಪಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳದಿದ್ದರೆ ಅಂತಹ ಖಾಲಿಹುದ್ದೆಗಳನ್ನು "ಶಾಶ್ವತ ಅನುದಾನ ರಹಿತ ಹುದ್ದೆ" ಎಂದು ಪರಿಗಣಿಸಲ್ಪಡುವುದರಿಂದ ಅಂತಹ ಖಾಲಿಹುದ್ದೆಗಳನ್ನು ತುಂಬಲು ಅವಕಾಶವಿರುವುದಿಲ್ಲ. ಈ ವಿಚಾರದಲ್ಲಿ ಹೆಚ್ಚುವರಿ ಶಿಕ್ಷಕರ ಸ್ಥಳಾಂತರ ಪ್ರಕ್ರಿಯೆ ಸಂಬಂಧ ಪ್ರತಿ ವರ್ಷ ಹೊರಡಿಸುವ ಸುತ್ತೋಲೆಗಳಲ್ಲಿ ನಿರ್ದೇಶಿಸಿದಂತೆ "ಹುದ್ದೆ ರದ್ದತಿ ವಹಿಯಲ್ಲಿ" ಅಗತ್ಯ ಅಂಶಗಳನ್ನು ದಾಖಲಿಸಿ ದೃಢೀಕರಿಸಿಕೊಳ್ಳಲು

ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸತಕ್ಕದ್ದು. ಇದಲ್ಲದೆ ಖಾಲಿ ಹುದ್ದೆ ಭರ್ತಿ ಮಾಡಿಕೊಳ್ಳಲು ಅನುಮತಿಗಾಗಿ ಸಲ್ಲಿಸುವ ಪ್ರಸ್ತಾವನೆಯಲ್ಲಿ ಈ ಅಂಶವನ್ನು ದಾಖಲಿಸತಕ್ಕದ್ದು. ಹುದ್ದೆ ಭರ್ತಿ ಮಾಡಲು ಅನುಮತಿ ನೀಡಿದ ತರುವಾಯ ಒಟ್ಟಾರೆ ಅನುದಾನಕ್ಕೆ ಒಳಪಡಿಸಿದ ಹುದ್ದೆಗಳ ಮಿತಿಯಲ್ಲಿರುವುದನ್ನು ದೃಢಪಡಿಸಿಕೊಳ್ಳತಕ್ಕದ್ದು. ಅಗತ್ಯವಿದ್ದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನಾ ವರದಿಯನ್ನು ತಯಾರಿಸಲು ಕ್ರಮಕೈಗೊಳ್ಳತಕ್ಕದ್ದು.

ಈಗಾಗಲೇ ಮೇಲೆ ವಿವರಿಸಿರುವಂತೆ ಸರ್ಕಾರ/ಇಲಾಖೆಯು ಹೊರಡಿಸಿದ ಎಲ್ಲಾ ಮಾನದಂಡಗಳನ್ನು ಪೂರೈಸಿದ ಅರ್ಹಪ್ರಕರಣಗಳ ಪ್ರಸ್ತಾವನೆಯನ್ನು ಮಾತ್ರ ನಿಯಮಾನುಸಾರ ಪರಿಶೀಲಿಸಿ ಸಲ್ಲಿಸತಕ್ಕದ್ದು. ನಿಯಮಬಾಹಿರ/ಅಪೂರ್ಣ ಪ್ರಸ್ತಾವನೆಗಳನ್ನು ಸಲ್ಲಿಸದೆ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು ಅವರ ಹಂತದಲ್ಲಿಯೇ ಹಿಂದಿರುಗಿಸಲು ಕ್ರಮವಹಿಸತಕ್ಕದ್ದು.

ಪ್ರಸ್ತಾವನೆಯೊಂದಿಗೆ ಈ ಸುತ್ತೋಲೆಯೊಂದಿಗೆ ಅನುಬಂಧಿಸಿದ ಆಡಳಿತ ಮಂಡಳಿಯ ಅಧೀನದಲ್ಲಿ ಒಂದಕ್ಕಿಂತ ಹೆಚ್ಚು ಅನುದಾನಿತ ಪ್ರೌಢಶಾಲೆಗಳು ನಡೆಯುತ್ತಿದ್ದಲ್ಲಿ ಸದರಿ ಶಾಲೆಗಳ ವಿದ್ಯಾರ್ಥಿಗಳ/ಮಾನ್ಯತೆ/ಮಂಜೂರಾದ ಹುದ್ದೆಗಳ/ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ/ಖಾಲಿಯಿರುವ ಹುದ್ದೆಗಳ ಮತ್ತು ಮೀಸಲಾತಿ ಬಿಂದುಗಳ ವಿವರಗಳನ್ನು ಒಳಗೊಂಡ ನಮೂನೆಯನ್ನು ಲಗತ್ತಿಸಿದೆ ಹಾಗೂ ಖಾಲಿ ಹುದ್ದೆ ಪ್ರಸ್ತಾವನೆ ಸಲ್ಲಿಕೆ ಸಂಬಂದ ನಿಗದಿತ ಚೆಕ್‌ಲಿಸ್ಟ್ ನಮೂನೆ/ ಈ ಕಛೇರಿಯ ದಿನಾಂಕ:30.01.2015ರ 05 ಅಂಶಗಳ ನಮೂನೆಯನ್ನು ಸಹ ಲಗತ್ತಿಸಿದೆ. ಮೇಲ್ಕಂಡ ಎಲ್ಲಾ ನಿಗದಿತ ನಮೂನೆಗಳ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿ ಅಗತ್ಯ ಪೂರಕ ದೃಢೀಕೃತ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ನಿರ್ದೇಶಕರು(ಪ್ರೌಢ ಶಿಕ್ಷಣ)

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1 ರವರಿಗೆ ಗೌರವಪೂರ್ಕವಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ಇವರಿಗೆ ಅಗತ್ಯ ಕ್ರಮಕ್ಕಾಗಿ,
3. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರಿಗೆ ನಿಯಮಾನುಸಾರ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿಯಮಾನುಸಾರ ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ದಿನಾಂಕ: 31.12.2014ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವ ಕುರಿತು.

ಓದಲಾಗಿದೆ :-

MAHANTAGOUD T PATIL SWCM KSPSTA

1. ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್ಇಪಿ 2017, ದಿನಾಂಕ: 29.06.2017.
2. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ8(1)ಶಾಶಿಅಖಾಹುಭ ಇತರೆ-1/2014-15, ದಿನಾಂಕ: 01.07.2017.

*****

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ: 01.01.2013 ರಿಂದ 31.12.2014ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಸಲಾದ ಸರ್ಕಾರಿ ಆದೇಶದಲ್ಲಿ ವಿಭಾಗವಾರು ಖಾಲಿ ಬೋಧಕ ಹುದ್ದೆಗಳ ಮರು ಹಂಚಿಕೆ ಮಾಡಿರುವುದಿಲ್ಲ. ಆದ್ದರಿಂದ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಯುಕ್ತಾಲಯದ ವಿಭಾಗವಾರು ಮರು ಹಂಚಿಕೆ ಮಾಡಿ ಆದೇಶ ಹೊರಡಿಸಲು ಕೋರಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್ಇಪಿ 2017,
## ಬೆಂಗಳೂರು, ದಿನಾಂಕ : 18ನೇ ಜುಲೈ, 2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ: 01.01.2013 ರಿಂದ 31.12.2014ರವರೆಗೆ ಖಾಲಿಯಾದ ಹುದ್ದೆಗಳನ್ನು

ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಿರುವುದನ್ನು ವಿಭಾಗವಾರು ಈ ಕೆಳಕಂಡಂತೆ ಹಂಚಿಕೆ ಮಾಡಿ ಆದೇಶಿಸಿದೆ.

| ಕ್ರಸ. | ವಿಭಾಗ | ದಿನಾಂಕ: 31.12.2012ರವರೆಗೆ ಖಾಲಿಯಾದ ಬೋಧಕ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ ಖಾಲಿ ಹುದ್ದೆಗಳ ಸಂಖ್ಯೆ(ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) | ದಿನಾಂಕ: 01.01.2013ರಿಂದ 31.12.2014ರವರೆಗೆ ಖಾಲಿಯಾದ ಬೋಧಕ ಹುದ್ದೆಗಳಲ್ಲಿ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ ಖಾಲಿ ಹುದ್ದೆಗಳ ಸಂಖ್ಯೆ(ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) |
|---|---|---|---|
| 1 | ಬೆಂಗಳೂರು/ ಮೈಸೂರು | 922 | 730 |
| 2 | ಕಲಬುರಗಿ | 84 | 157 |
| 3 | ಧಾರವಾಡ | 470 | 388 |
| ಒಟ್ಟು | | 1476 | 1275 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T
(ವಿ.ಟಿ.ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
4. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
6. ಜಿಲ್ಲಾ ಪಂಚಾಯಿತಿಗಳ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
7. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-8), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿ,
2. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ-ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ದಿನಾಂಕ: 31.12.2014ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವ ಕುರಿತು.

ಓದಲಾಗಿದೆ :-

MAHANTAGOUD T PATIL SWCM KSPSTA

1. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಎಸ್ಇಪಿ 2011, ದಿನಾಂಕ: 16.07.2014.
2. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ8(1)ಶಾಶಿಅಖಾಹುಭ ಇತರೆ-1/2014-15, ದಿನಾಂಕ: 06.06.2017.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 144 ಟಿಪಿಯು 2016, ದಿನಾಂಕ: 09.02.2017.

*****

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2008ರ ಪೂರ್ವದಲ್ಲಿ ಖಾಲಿಯಾದ 3661 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಒಪ್ಪಿಗೆ ನೀಡಲಾಗಿತ್ತು. ಅದರಲ್ಲಿ 2327 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿ, ವಿವಿಧ ಶಾಲೆಗಳು ನಿಗಧಿತ ಮಾನದಂಡಗಳನ್ನು ಪೂರೈಸದಿರುವುದರಿಂದ ಇನ್ನೂ ಭರ್ತಿ ಮಾಡದೇ 1334 ಹುದ್ದೆಗಳು ಬಾಕಿ ಉಳಿದಿದ್ದವು. ಈ ಬಾಕಿ ಹುದ್ದೆಗಳನ್ನು ದಿನಾಂಕ: 01.01.2009 ರಿಂದ 31.12.2012ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ತೆರವಾಗಿದ್ದ 2516 ಬೋಧಕ ಹುದ್ದೆಗಳಿಗೆ ಎದುರಾಗಿ ಭರ್ತಿ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಖಾಲಿ ಹುದ್ದೆಗಳನ್ನು, ದಿನಾಂಕ: 01.01.2013 ರಿಂದ 31.12.2014ರವರೆಗೆ ಹಾಗೂ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಖಾಲಿ ಹುದ್ದೆಗಳನ್ನು ಹಾಗೂ ದಿನಾಂಕ: 01.01.2014 ರಿಂದ 31.12.2015ರವರೆಗೆ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 877 ಖಾಲಿ ಹುದ್ದೆಗಳನ್ನು (ವಿಶೇಷ ಶಿಕ್ಷಕರುಗಳನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಲಾಗಿದೆ.

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ: 31.12.2015ರವರೆಗೆ ನಿವೃತ್ತಿ, ನಿಧನ, ರಾಜೀನಾಮೆ, ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ಬಡ್ತಿ ಮೂಲಕ ತೆರವಾದ ಮತ್ತು ಇತರ ಕಾರಣಗಳಿಂದ ತೆರವಾದ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ. ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರುಗಳ ಕಾರ್ಯಭಾರವನ್ನು ಪುನರ್ ಪರಿಶೀಲಿಸಬೇಕಾಗಿರುವುದರಿಂದ ಹಾಗೂ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿಗೆ ಅನುಗುಣವಾಗಿ ಶಿಕ್ಷಕರ ನೇಮಕಾತಿ/ಅನುಮೋದನೆಯನ್ನು ಗಮನದಲ್ಲಿಟ್ಟುಕೊಂಡು ಅಕರಣೀಕರಣ(Rationalisation)

ಗೊಳಿಸಬೇಕಾಗಿರುವುದನ್ನು ಮನಗಂಡು ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2014ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಲು ಅನುಮತಿ ನೀಡಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

MAHANTAGOUD T PATIL SWCM KSPSTA

**ಸರ್ಕಾರಿ ಆದೇಶ ಸಂಖ್ಯೆ : ಇಡಿ 14 ಎಸ್‌ಇಪಿ 2017,**

**ಬೆಂಗಳೂರು, ದಿನಾಂಕ : 29ನೇ ಜೂನ್, 2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ: 01.01.2013 ರಿಂದ 31.12.2014ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ.

1. ಮೇಲ್ಕಂಡ ಖಾಲಿ ಹುದ್ದೆಗಳ ಭರ್ತಿ ಅನುಮೋದನೆಯು ವಿಷಯ ಶಿಕ್ಷಕರುಗಳಿಗೆ ಮಾತ್ರ ಅನ್ವಯಿಸುತ್ತದೆ.
2. ನಿರ್ದಿಷ್ಟ ಖಾಲಿ ಹುದ್ದೆಯು (ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ) ಮೂಲತಃ ಅನುದಾನಿತ ಹುದ್ದೆಯಾಗಿರತಕ್ಕದ್ದು.
3. ಅರ್ಹತೆ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿ ಮಾನದಂಡಗಳನ್ನು ಪಾಲಿಸಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸತಕ್ಕದ್ದು. ಮೇಲಿನ ವಿವರಗಳನ್ನು ಖಚಿತಪಡಿಸಿಕೊಂಡ ನಂತರವೇ ಸಕ್ಷಮ ಪ್ರಾಧಿಕಾರವು ಅನುಮೋದಿಸತಕ್ಕದ್ದು.
4. ಸಂಬಂಧಿಸಿದ ಅನುದಾನಿತ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು (Regular Candidates only) ಕಳೆದ 5 ಶೈಕ್ಷಣಿಕ ವರ್ಷಗಳ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು.
5. ಸಂಬಂಧಿಸಿದ ಅನುದಾನಿತ ಶಾಲೆಯು ಕನಿಷ್ಠ ಮಕ್ಕಳ ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ಈ ಹಾಜರಾತಿ/ದಾಖಲಾತಿ ನಿಗಧಿತ ಮಟ್ಟದಲ್ಲಿರುವುದನ್ನು Student Tracking System ರನ್ವಯ ಖಚಿತಪಡಿಸಿಕೊಳ್ಳತಕ್ಕದ್ದು.
6. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿಗೆ ಅನುಗುಣವಾಗಿ ಶಿಕ್ಷಕರ ನೇಮಕಾತಿ/ಅನುಮೋದನೆಯನ್ನು ಗಮನದಲ್ಲಿಟ್ಟುಕೊಂಡು ಅಕರಣೀಕರಣ (Rationalisation) ಗೊಳಿಸುವುದು;
7. ಶಾಲೆಯು ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
8. ಖಾಲಿ ಹುದ್ದೆ ಭರ್ತಿಯಲ್ಲಿ ಸರ್ಕಾರವು ನಿಗದಿಪಡಿಸಿರುವ ಮೀಸಲಾತಿ ನಿಯಮಾವಳಿಯಡಿಯಲ್ಲಿ ಭರ್ತಿ ಮಾಡತಕ್ಕದ್ದು;
9. ಶಿಕ್ಷಕರ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಯು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಧಿಸೂಚನೆ ಸಂಖ್ಯೆ : ಇಡಿ 291 ಎಲ್‌ಬಿಪಿ 2015, ದಿನಾಂಕ : 29-09-2016ರಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು;

10. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ತೆರವಾದ ಬೋಧಕ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.
11. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು 1999 ಹಾಗೂ ಅವುಗಳಿಗೆ ಮಾಡಲಾದ ತಿದ್ದುಪಡಿ ನಿಯಮಗಳನ್ವಯ ಮತ್ತು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರಲ್ಲಿನ ಸೂಚನೆಗಳನ್ವಯ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಆಯುಕ್ತರು/ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನೇಮಕಾತಿಯನ್ನು ಅನುಮೋದನೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಎಸ್‌ಇಪಿ 2007(ಭಾಗ), ದಿನಾಂಕ: 31.03.2008ರಲ್ಲಿ ನಿಗಧಿಪಡಿಸಿರುವ ಪರಿಶೀಲನಾ ಪಟ್ಟಿಯಲ್ಲಿ (Check-list) ಭರ್ತಿ ಮಾಡಿದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 434 ವೆಚ್ಚ-8/2017, ದಿನಾಂಕ : 19.06.2017ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

Rajyashree V.T
(ವಿ.ಟಿ.ರಾಜ್ಯಶ್ರೀ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರೌಢ ಶಿಕ್ಷಣ).

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
4. ನಿರ್ದೇಶಕರು(ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ.
6. ಜಿಲ್ಲಾ ಪಂಚಾಯಿತಿಗಳ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
7. ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-8), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿ,
2. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ-ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು.

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ8[6] ಶಾಶಿಆ.ಖಾಹುಭ.ಅನು/01/2007-08

ದಿ:30.01.2015

**ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ**
**ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)**

ವಿಷಯ: ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿ: 01.01.2009ರಿಂದ ದಿ:31.12.2012ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ, ವರ್ಗಾವಣೆ ಇನ್ನಿತರೆ ಕಾರಣಗಳಿಂದ ಖಾಲಿಯಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಚೆಕ್-ಲಿಸ್ಟ್ ನಲ್ಲಿ ಹೆಚ್ಚುವರಿ ಮಾಹಿತಿ ಸಲ್ಲಿಸುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಎಸ್ಇಪಿ 2011, ದಿ: 16.07.2014.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 15 ಎಸ್ಇಪಿ 2011, ದಿ:19.11.2014
3. ಈ ಕಛೇರಿಯ ಸುತ್ತೋಲೆ ಸಮಸಂಖ್ಯೆ ದಿನಾಂಕ:02.01.2015

**************

ಉಲ್ಲೇಖ-1 ರ ಸರ್ಕಾರದ ಆದೇಶ ಮತ್ತು ಉಲ್ಲೇಖ-2 ರ ಸರ್ಕಾರದ ಸ್ಪಷ್ಟೀಕರಣದಂತೆ ದಿನಾಂಕ:01.01.2009 ರಿಂದ 31.12.2012 ರವರೆಗೆ ರಾಜ್ಯದಲ್ಲಿನ ಖಾಸಗಿ ಅನುದಾನಸಹಿತ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಉಲ್ಲೇಖ-3 ರಲ್ಲಿ ಈ ಕಛೇರಿಯಿಂದ ಚೆಕ್-ಲಿಸ್ಟ್ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿದೆ. ಅದರಂತೆ ಈಗ ನಿಮ್ಮಿಂದ ಬರುತ್ತಿರುವ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿ ಮತ್ತು ವರದಿ ಬರುತ್ತಿಲ್ಲ ಆದುದರಿಂದ ಈಗಾಗಲೇ ತಮಗೆ ಕಳುಹಿಸಿಕೊಟ್ಟಿರುವ ಚೆಕ್-ಲಿಸ್ಟ್ ನಲ್ಲಿರುವ ಮಾಹಿತಿಗಳ ಜೊತೆಗೆ ಈ ಕೆಳಕಂಡ ವಿವರಗಳಿಗೆ ಮಾಹಿತಿಯನ್ನು ಪರಿಶೀಲಿಸಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ಸೂಚಿಸಿದೆ.

**************

| ಕ್ರಸಂ | ವಿವರ | ವಸ್ತುಸ್ಥಿತಿ ವರದಿ |
|---|---|---|
| 1 | ಪ್ರತಿ ಶಾಲೆಯಲ್ಲಿ ಮೇಲಿನಂತೆ ಹುದ್ದೆ ಖಾಲಿಯಾಗಿದ್ದಲ್ಲಿ ಪ್ರಥಮವಾಗಿ ಹುದ್ದೆ ಮಂಜೂರಾಗಿದ್ದು, ಆ ಹುದ್ದೆ ತೆರವಾಗಲು ಕಾರಣ ಸಹಿತ ವಿವರ. [ಶಿಕ್ಷಕರ ವಿವರದೊಂದಿಗೆ] | |
| 2 | ಅ)ದಿನಾಂಕ:31.12.2008 ರ ಪೂರ್ವದಲ್ಲಿ ನಿಮ್ಮ ಜಿಲ್ಲೆಯಲ್ಲಿ ಭರ್ತಿಯಾಗದೇ ಉಳಿದಿರುವ ವಿಷಯವಾರು ಹುದ್ದೆಗಳ ಸಂಖ್ಯೆ ಎಷ್ಟು?<br>ಆ)ಸದರಿ ಹುದ್ದೆಗಳು ಪ್ರಸ್ತುತ ಖಾಲಿಯಾಗಿಯೇ ಉಳಿದಿವೆಯೇ? ಮತ್ತು ಯಾವ ಕಾರಣಕ್ಕಾಗಿ ಭರ್ತಿ ಮಾಡಲಾಗಿಲ್ಲ ಎಂಬುದರ ಬಗ್ಗೆ ಸಕಾರಣದ ವರದಿ | |
| 3 | ಅ)ಸರ್ಕಾರದ ಆದೇಶದಲ್ಲಿ ಅನುಮತಿಸಿರುವಂತೆ ಪ್ರಸ್ತಾವನೆಯನ್ನು ಸಲ್ಲಿಸುವ ಮೊದಲು ದಿನಾಂಕ:31.12.2008 ರ ಪೂರ್ವದಲ್ಲಿ ಖಾಲಿಯಾಗಿರುವ ಹುದ್ದೆಗಳನ್ನು ಆಡಳಿತ ಮಂಡಳಿಯವರು ಭರ್ತಿಸದೇ ಹಾಗೆಯೇ ಬಿಡಲಾಗಿದೆಯೇ?<br>ಆ)ಹೌದಾದಲ್ಲಿ ಹುದ್ದೆಗಳನ್ನು ತುಂಬದೇ ದಿನಾಂಕ:01.01.2009 ರಿಂದ 31.12.2012ರವರೆಗೆ ಖಾಲಿಯಾಗಿರುವ ಹುದ್ದೆಯ ಭರ್ತಿಗೆ ಪ್ರಸ್ತಾವನೆ ಸಲ್ಲಿಸಲು ಕಾರಣ (ಹುದ್ದೆಗಳ ಜೇಷ್ಠತೆಯ ಬಗ್ಗೆ ಪರಿಶೀಲಿಸಿಕೊಳ್ಳಬೇಕು) ಆ ಬಗ್ಗೆ ಮೊದಲು ಖಚಿತಪಡಿಸಿಕೊಳ್ಳುವುದು ಹಾಗೆಯೇ ವರ್ಷಾವಾರು ಹಿಂಬಾಕಿ ಹುದ್ದೆಗಳು ಇಲ್ಲದಿರುವುದನ್ನು ಖಚಿತಪಡಿಸಿರುವ ಶಾಲಾವಾರು ಮಾಹಿತಿ. | |
| 4 | ಅ)ಜಿಲ್ಲೆಯ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರಿದ್ದು, ಈ ಶಾಲೆಗೆ ಮರುಹಂಚಿಕೆ ಮಾಡಿ ಸ್ಥಳನಿಯುಕ್ತಿಗೊಳಿಸಲಾಗಿದೆಯೇ?<br>ಆ)ಈ ಶಾಲೆಯವರು ಸದರಿಯವರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳದೇ ನಿರಾಕರಿಸಿದ್ದಾರೆಯೇ? ಇಲ್ಲವೇ?<br>ಇ)ನಿರಾಕರಿಸಿದ್ದು ಹೌದಾದಲ್ಲಿ ಶಾಶ್ವತ ಅನುದಾನ ರಹಿತ ಹುದ್ದೆ ಎಂದು ಘೋಷಿಸಲಾಗಿದೆಯೇ ಅಥವಾ ಸದರಿ ಹುದ್ದೆಯಲ್ಲಿ ಮರುಹಂಚಿಕೆ ಮಾಡಿದ ಹೆಚ್ಚುವರಿ ಶಿಕ್ಷಕರ ವೇತನ ಸೆಳೆಯಲಾಗುತ್ತಿದೆಯೇ? ಇಲ್ಲವೇ | |
| | ನಿಗದಿತ ಚೆಕ್-ಲಿಸ್ಟ್ ನಂತೆ ಪರಿಶೀಲಿಸಿಕೊಂಡು ಪ್ರತಿಯೊಂದು ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಖಚಿತಪಡಿಸಿಕೊಂಡು / ಇಲಾಖಾ ಸಂಭಂದಿತ ಅಧಿಕಾರಿಗಳು ದೃಡೀಕರಿಸಿ ಪೂರ್ಣ ಪ್ರಸ್ತಾವನೆಯನ್ನು ಉಲ್ಲೇಖ-3 ರ ಸುತ್ತೋಲೆಯಂತೆ ಸಲ್ಲಿಸುವುದು, | |

Kulomuah
ನಿರ್ದೇಶಕರು (ಪ್ರೌಢಶಿಕ್ಷಣ)

\\10.96.135.22\e\D\EST2\200.doc

96

## ಒಂದು ಸಂಸ್ಥೆ ವತಿಯಿಂದ ಒಂದು ಮತ್ತು ಒಂದಕ್ಕಿಂತ ಹೆಚ್ಚು ಪ್ರೌಢಶಾಲೆಗಳು ನಡೆಯುತ್ತಿರುವ ಶಾಲೆಗಳ ಖಾಲಿ ಹುದ್ದೆ ಭರ್ತಿಯ ಚೆಕ್ ಲಿಸ್ಟ್

ಒಟ್ಟು ಶಾಲೆಗಳ ಸಂಖ್ಯೆ:

| ಕ್ರ ಸಂ | ಶಾಲೆಯ ಹೆಸರು ಮತ್ತು ವಿಳಾಸ | ಶಾಲಾ ಮಾನ್ಯತೆಯಂತೆ ಮಂಜೂರಾಗಿರುವ ಅನುದಾನಿತ ತರಗತಿ ಮತ್ತು ವಿಭಾಗಗಳು ಕನ್ನಡ/ಆಂಗ್ಲ/ಉರ್ದು | ತರಗತಿವಾರು ವಿದ್ಯಾರ್ಥಿಗಳ ದಾಖಲಾತಿ ಹಾಜರಾತಿ ಕನ್ನಡ/ಆಂಗ್ಲ/ಉರ್ದು | ವಿಷಯವಾರು ಮಂಜೂರಾದ ಹುದ್ದೆಗಳ ಸಂಖ್ಯೆ | ಕಾಲಂ-3 ಮತ್ತು 4ರಂತೆ ಅರ್ಹತೆ ಇರುವ ಬೋಧಕ ಸಿಬ್ಬಂದಿ ಸಂಖ್ಯೆ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರ/ಸಂಖ್ಯೆ | ಪ್ರಸ್ತುತ ಖಾಲಿ ಇರುವ ವಿಷಯವಾರು ಹುದ್ದೆಗಳು | ಹಿಂದಿನ ನೇಮಕಾತಿಯಲ್ಲಿನ ಕೊನೆಯ ರೋಸ್ಟರ್ ಬಿಂದು | ಪ್ರಸ್ತುತ ನೇಮಕಾತಿಗೆ ನಿಗಧಿಪಡಿಸಬೇಕಾದ ರೋಸ್ಟರ್ ಬಿಂದು | ಸಮತಲ ಮೀಸಲಾತಿ | ಷರಾ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ ಕೆ. ಆರ್. ವೃತ್ತ ಬೆಂಗಳೂರು–560 001

ಸಂಖ್ಯೆ: ಸಿ 8 ( ) ಶಾಶಿಅ.ಖಾ.ಹು.ಭ.ಅನು: /2014–15 ದಿನಾಂಕ: – –2015

–: ಟಿಪ್ಪಣಿ ಮತ್ತು ಆದೇಶಗಳು :–

ವಿಷಯ: -----------------------------------------------------------------------

ಪ್ರೌಢಶಾಲೆಯಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಬಗ್ಗೆ

ಉಲ್ಲೇಖ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,-------------------

ಜಿಲ್ಲೆ, ಇವರ ಪತ್ರ ಸಂಖ್ಯೆ:-----------------------------------------

ದಿನಾಂಕ:

| ಕ್ರ | ವಿವರ | ವಸ್ತು ಸ್ಥಿತಿ | ಪುಟ ಸಂಖ್ಯೆ |
|---|---|---|---|
| 1 | ಆಡಳಿತ ಮಂಡಳಿ ಹೆಸರು ಮತ್ತು ವಿಳಾಸ | | |
| 2 | ಎಲ್ಲಿಯವರೆವಿಗೆ ಮ್ಯಾನೇಜ್‌ಮೆಂಟ್ ನವೀಕರಣವಾಗಿದೆ. ಆದೇಶ ಸಂಖ್ಯೆ: ದಿನಾಂಕ | | |
| 3 | ಆಡಳಿತ ಮಂಡಳಿಯಲ್ಲಿ ವ್ಯಾಜ್ಯ ಇವೆಯೇ? | | |
| 4 | ಆಡಳಿತ ಮಂಡಳಿ ಕರೆಸ್ಪಾಂಡೆಂಟ್ ಕಾರ್ಯದರ್ಶಿಯವರ ವಿಳಾಸ | | |
| 5 | ಆಡಳಿತ ಮಂಡಳಿ ಭಾಷಾ ಮತೀಯ ಅಲ್ಪಸಂಖ್ಯಾತ ಶಾಲೆಯೇ? ಆದೇಶ ಸಂಖ್ಯೆ ದಿನಾಂಕ | | |
| 6 | ಆಡಳಿತ ಮಂಡಳಿ ನಡೆಸುತ್ತಿರುವ ಶಾಲೆಗಳ ಸಂಖ್ಯೆ | | |
| 7 | ಇವುಗಳಲ್ಲಿ ಅನುದಾನಿತ ಶಾಲೆಗಳೆಷ್ಟು; ಅವು ಯಾವ ಯಾವ ಜಿಲ್ಲೆಗಳಲ್ಲಿವೇ? | | |

8. ಹುದ್ದೆ ಭರ್ತಿಗಾಗಿ ಪ್ರಸ್ತಾಪಿಸಿರುವ ಶಾಲೆಗಳ ವಿವರ

| ವಿವರ | ಶಾಲೆಯ ಹೆಸರು | ಮು ಸಂ | ಶಾಲೆಯ ಹೆಸರು | ಮು ಸಂ | ಶಾಲೆಯ ಹೆಸರು | ಮು ಸಂ | ಶಾಲೆಯ ಹೆಸರು | ಮು ಸಂ |
|---|---|---|---|---|---|---|---|---|
| ಯಾವ ಸಾಲಿನವರೆವಿಗೆ ಮಾನ್ಯತೆ ನವೀಕರಿಸಿದೆ. | | | | | | | | |
| ಎಷ್ಟು ವಿಭಾಗಳಿಗೆ ಮಾನ್ಯತೆ ನವೀಕರಿಸಿದೆ | | | | | | | | |

| ವಿದ್ಯಾರ್ಥಿಗಳ ದಾಖಲಾತಿ | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | 8 | 9 | 10 | ಮುಸಂ | | 8 | 9 | 10 | ಮುಸಂ | | 8 | 9 | 10 | ಮುಸಂ | | 8 | 9 | 10 | ಮುಸಂ |
| | | | | | | | | | | | | | | | | | | | | |

| ವಿದ್ಯಾರ್ಥಿಗಳ ದಾಖಲಾತಿ | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | | ಮಾಧ್ಯಮ | ತರಗತಿ | | | |
|---|---|---|---|---|---|---|---|---|---|---|---|---|---|---|---|---|---|---|---|---|
| | | 8 | 9 | 10 | ಮುಸಂ | | 8 | 9 | 10 | ಮುಸಂ | | 8 | 9 | 10 | ಮುಸಂ | | 8 | 9 | 10 | ಮುಸಂ |
| | | | | | | | | | | | | | | | | | | | | |

| | | | |
|---|---|---|---|
| 9 | ಸಹಾಯಾನುದಾನಕ್ಕೊಳಪಟ್ಟ ಸರ್ಕಾರಿ ಆದೇಶದ ಸಂಖ್ಯೆ ದಿನಾಂಕ ಮತ್ತು ಪ್ರಾಧಿಕಾರಿ ಯಾರು | | |
| 10 | ಸಿಬ್ಬಂದಿ ಪಟ್ಟಿ ಇದೆ – ಇಲ್ಲ | | |
| 11 | ಅ] ಸಿಬ್ಬಂದಿ ಪಟ್ಟಿ<br>ಆ] ಹಾಜರಾತಿ/ಆರ್.ಆರ್ ಪ್ರಕಾರ ಯಾವುದಾದರೂ ಹುದ್ದೆ ಹೆಚ್ಚುವರಿಯಾಗಿದೆಯೇ ಇದ್ದಲ್ಲಿ ವಿವರ.<br>ಇ] ಈ ರೀತಿ ಹೆಚ್ಚುವರಿಯಾದ ಶಿಕ್ಷಕರನ್ನು ತಮ್ಮದೇ ಸಂಸ್ಥೆಯ ಇತರೆ ಶಾಲೆಗಳಿಗೆ ತೈನಾತಿಸಬಹುದೇ? ಹೌದಾದರೆ ಯಾವ ಶಾಲೆಗಳಿಗೆ<br>ಈ] ಹಾಜರಾತಿ/ ಆರ್.ಆರ್.ರಂತೆ ಅನುಮತಿಸಿರುವ ವಿಭಾಗಗಳು ಹೆಚ್ಚುವರಿಯಾಗಿವೆಯೇ? | | |

| | | | |
|---|---|---|---|
| 12 | ಮೂಲಭೂತ ಸೌಲಭ್ಯಗಳು<br>ಅ] ಸ್ವಂತ ಕಟ್ಟಡವೇ?<br>ಆ] ಮೌಲ್ಯಾಂಕಗಳು<br>ಇ]ಕುಡಿಯುವ ನೀರು ಇದೆ/ಇಲ್ಲ<br>ಈ]ಶೌಚಾಲಯ ಹೆಣ್ಣು ಗಂಡು ಮಕ್ಕಳಿಗೆ ಪ್ರತ್ಯೇಕ ಇದೆ/ಇಲ್ಲ<br>ಉ] ಪೋಟೋ ಇದೆ/ಇಲ್ಲ | | |
| 13 | ಅ] ಆರ್.ಆರ್./ಹಾಜರಾತಿ/ ಸಿಬ್ಬಂದಿ ತುಕ್ತೆ ಆಧರಿಸಿ ನೀಡಬೇಕಾದ ಹುದ್ದೆ ಹೆಸರು ಮತ್ತು ಸಂಖ್ಯೆ<br>ಆ] ಈ ಹುದ್ದೆ ಖಾಲಿ ಆದ ದಿನಾಂಕ<br>ಇ] ಈ ಹುದ್ದೆ ಉದ್ಭವವಾದ ಬಗ್ಗೆ [ನಿವೃತ್ತಿ, ನಿಧನ ವರ್ಗಾವಣೆ, ರಾಜೀನಾಮೆ] | | |
| 14 | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣತೆ<br>ಅ] ಪರೀಕ್ಷೆಗೆ ಕುಳಿತವರು<br>ಆ] ಪಾಸಾದವರು<br>ಇ] ಶೇ.ಉತ್ತೀರ್ಣತೆ<br>ಈ] ಜಿಲ್ಲೆಯ ಸರಾಸರಿ ಉತ್ತೀರ್ಣತೆ | | |
| 15 | ದಿ: 22.11.2006ರ ಸರ್ಕಾರಿ ಆದೇಶದಂತೆ ಮೀಸಲಾತಿ ದಾಖಲಾತಿ ಹಾಜರಾತಿಯಲ್ಲಿ ಇರತಕ್ಕದ್ದು.<br>[ಎಸ್‌ಸಿ–15%, ಎಸ್‌ಟಿ 3%, ಪ್ರ1–4%, 2ಎ–15%, 2ಬಿ–4, 3ಎ–4, 3ಬಿ–5, ಜಿಎಂ–50]<br>ಆ] ದಾಖಲಾತಿ ಹಾಜರಾತಿಯಲ್ಲಿ ಈ ಪ್ರಮಾಣ ಇಲ್ಲದಿದ್ದರೆ, ಕಾರಣಗಳು | | |
| ಈಗ ಅನುಮತಿ ನೀಡಬೇಕಾಗಿರುವ ಖಾಲಿ ಹುದ್ದೆ ವಿವರ | | | |
| 16 | ಹುದ್ದೆ ಖಾಲಿಯಾಗಿದ್ದು ಯಾವಾಗ, ಯಾರಿಂದ, ಹೇಗೆ | | |
| 17 | ಹಿಂದೆ ಅನುಮತಿಸಿದ ಬಿಂದು | | |

| | | | |
|---|---|---|---|
| 18 | ಈಗ ಅನುಮತಿ ನೀಡಬೇಕಾಗಿರುವ ಬಿಂದು (ದಿ:20.06.1995ರ ಮೀಸಲಾತಿಯಂತೆ) | | |
| 19 | ಕ್ಷೇತ್ರಶಿಕ್ಷಣಾಧಿಕಾರಿಗಳ ಅಭಿಪ್ರಾಯ | | |
| 20 | ಉಪನಿರ್ದೇಶಕರ ಅಭಿಪ್ರಾಯ | | |
| | | | |

ಆಡಳಿತ ಮಂಡಳಿ ಹೆಸರು, ವಿಳಾಸ , ಫೋನ್ ನಂಬರ್

ಕ್ರಸ್ಪಾಂಡೆಂಟ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
|---|---|---|---|---|---|---|---|---|---|---|---|---|---|---|---|---|---|---|---|
| ಕ್ರಸಂ | ತಾಲ್ಲೂಕು | ಜಿಲ್ಲೆ | ಶಾಲೆಯ ಹೆಸರು ಮತ್ತು ವಿಳಾಸ ಹಾಗೂ ಡೈಸ್ ಕೋಡ್ | ಮಾಧ್ಯಮ | ಮಾನ್ಯತೆ ನವೀಕರಣ | | ಮಾಧ್ಯಮವಾರು ಮಂಜೂರಾದ ಅನುದಾನಿತ ವಿಭಾಗಗಳ | | | ಮಾಧ್ಯಮವಾರು ಮಂಜೂರಾದ ಅನುದಾನ ರಹಿತ ವಿಭಾಗಗಳ | | | ತರಗತಿಗಳು | ಮಾಧ್ಯಮವಾರು ಮಕ್ಕಳ ದಾಖಲಾತಿ ಹಾಜರಾತಿ ದಿ 20/03/2015 ರಂತೆ | | | | | |
| | | | | | | | | | | | | | | ಕನ್ನಡ | | ಆಂಗ್ಲ | | ಇತರೆ | |
| | | | | | ರಿಂದ | ರವರಗೆ | 8 | 9 | 10 | 8 | 9 | 10 | | ದಾಖಲಾ | ಹಾಜರಾತಿ | ದಾಖಲಾ | ಹಾಜರಾತಿ | ದಾಖಲಾ | ಹಾಜರಾತಿ |
| | | | | ಕನ್ನಡ | | | | | | | | | 8 | | | | | | |
| | | | | | | | | | | | | | 9 | | | | | | |
| | | | | ಆಂಗ್ಲ | | | | | | | | | 10 | | | | | | |
| | | | | ಇತರ | | | | | | | | | ಒಟ್ಟು | | | | | | |
| | | | | ಕನ್ನಡ | | | | | | | | | 8 | | | | | | |
| | | | | | | | | | | | | | 9 | | | | | | |
| | | | | ಆಂಗ್ಲ | | | | | | | | | 10 | | | | | | |
| | | | | ಇತರ | | | | | | | | | ಒಟ್ಟು | | | | | | |
| | | | | ಕನ್ನಡ | | | | | | | | | 8 | | | | | | |
| | | | | | | | | | | | | | 9 | | | | | | |
| | | | | ಆಂಗ್ಲ | | | | | | | | | 10 | | | | | | |
| | | | | ಇತರ | | | | | | | | | ಒಟ್ಟು | | | | | | |

MAHANTAGOUD T PATIL SWCM KSPSTA



ಆಡಳಿತ ಮಂಡಳಿ ಹೆಸರು, ವಿಳಾಸ , ಫೋನ್ ನಂಬರ್

ಕ್ರಸ್ಪಾಂಡೆಂಟ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ

| 1 | 2 | 3 | 4 | 21 | 22 | 23 | 24 | 25 | 26 | 27 | 28 | 29 | 30 | 31 | 32 |
|---|---|---|---|---|---|---|---|---|---|---|---|---|---|---|---|
| ಕ್ರಸಂ | ತಾಲ್ಲೂಕು | ಜಿಲ್ಲೆ | ಶಾಲೆಯ ಹೆಸರು ಮತ್ತು ವಿಳಾಸ ಹಾಗೂ ಡೈಸ್ ಕೋಡ್ | ವಿಷಯವಾರು ಹುದ್ದೆಗಳ ವಿವರ (ಮು.ಶಿ ವಿಷಯ ಸೇರಿದಂತೆ) | | | | | | | | | | | |
| | | | | ಹುದ್ದೆಗಳು | PCM | CBZ | ARTS | 1 LANG | 2 LANG | 3 LANG | PE | CRAFT | 0& ABOVE | OTHER | TOTAL |
| | | | | ಮಂಜೂರಾದ | | | | | | | | | | | |
| | | | | ಹಾಲಿ | | | | | | | | | | | |
| | | | | ಖಾಲಿಯಿರುವ | | | | | | | | | | | |
| | | | | ಉದ್ಭವ ದಿನಾಂಕ | | | | | | | | | | | |
| | | | | ಕಾರಣ | | | | | | | | | | | |
| | | | | ಮಂಜೂರಾದ | | | | | | | | | | | |
| | | | | ಹಾಲಿ | | | | | | | | | | | |
| | | | | ಖಾಲಿಯಿರುವ | | | | | | | | | | | |
| | | | | ಉದ್ಭವ ದಿನಾಂಕ | | | | | | | | | | | |
| | | | | ಕಾರಣ | | | | | | | | | | | |
| | | | | ಮಂಜೂರಾದ | | | | | | | | | | | |
| | | | | ಹಾಲಿ | | | | | | | | | | | |
| | | | | ಖಾಲಿಯಿರುವ | | | | | | | | | | | |
| | | | | ದಿನಾಂಕ | | | | | | | | | | | |
| | | | | ಉದ್ಭವ ದಿನಾಂಕ | | | | | | | | | | | |